ಓಂ

# ಕರ್ನಾಟಕ ವರ್ಣಗೀತೆ.

ಪ್ರಕಾಶಕ

ಮದ್ದೂರು ಟಿ. ಬಿ. ಸ್ಕೂಲು ಹೆಡ್ಮಾಸ್ಟರ್

ಎಸ್. ಶ್ರೀಕಂಠಯ್ಯ.

ಚಂದ್ರೇಣ ಚಾರುಚರಿತೇನ ವಿಕಾಸಿತಂ ಸತ್
ಸಂಕೋಚಿತಂ ಭವತಿ ಕಿಂ ಕುಮುದಂ ತಮೋಭಿಃ ॥

ಪ್ರಥಮ ಮುದ್ರಣ, ೧,೦೦೦ ಪ್ರತಿಗಳು.

PRINTED
AT THE CROWN PRESS,
MYSORE:
1909

[...t Registered.]

NR
N08
3901

...ಭಂಡಾರ
ಪರಿಷತ್ತು
ಕವಿತೆ ...೬೭...

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

3901

ಓಂ

# ಕರ್ನಾಟಕ ವರ್ಣಗೀತೆ.

ಕರ್ನಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
ಕ್ರಮ ಸಂಖ್ಯೆ 3901 ವರ್ಗ ಸಂಖ್ಯೆ........
ತಾರೀಖು..........
ಪ್ರಕಾಶಕ
ಬೆಲೆ..........

ಮದ್ದೂರು ಟಿ. ಬಿ. ಸ್ಕೂಲ್ ಹೆಡ್ಮಾಸ್ಟರ್

ಎಸ್. ಶ್ರೀಕಂಠಯ್ಯ.

3842/9

---

ಪ್ರಥಮ ಮುದ್ರಣ, ೧,೦೦೦ ಪ್ರತಿಗಳು.

---

**MYSORE:**
PRINTED AT THE CROWN PRESS,
1909.

*[Copyright Registered.]*

Digitized by ROJA MUTHIAH RESEARCH LIBRARY

NR N08

# ಪೀಠಿಕೆ.

ಕನ್ನಡಬಾಂಧವರೇ! ಮಾತೃಭಾಷೆಯಾದ ಕನ್ನಡ ಅಕ್ಷರಾಭ್ಯಾಸ ಕ್ರಮವು—ಬಳೆಕಡ್ಡಿಗಳ ರಚನೆ, ಗಾನ, ಮತ್ತು ಆಟಗಳ ರೂಪದಲ್ಲಿ ಮಕ್ಕಳಿಗೆ ಮನೋಹರವಾಗಿರುವಂತೆ ನಡೆಯಬೇಕೆಂಬ ಕುತೂಹಲದಿಂದ ಈ ಪುಸ್ತಕವನ್ನು ರಚಿಸಿರುವುದು.

ಇದರಂತೆ ಬಳೆಕಡ್ಡಿಗಳಿಂದ ಅಕ್ಷರಗಳನ್ನು ರಚಿಸಬೇಕಾದರೆ—ಬೇರೆಬೇರೆ ಮೂರುಪರಿಮಾಣವುಳ್ಳ ಬಳೆಗಳೂ, ಅವುಗಳ ಅರ್ಧ, ಕಾಲು ಭಾಗಗಳೂ ಮತ್ತು ಕಡ್ಡಿಗಳೂ ಇರಬೇಕಾಗುವುದು.

ಇದೇರೀತಿಯಾಗಿ ನೆನಸಿದ ದಪ್ಪದಾರದ ತುಂಡುಗಳಿಂದಲೂ, ಕತ್ತರಿಸಿದ ದಪ್ಪಕಾಗದದ ಚೂರುಗಳಿಂದಲೂ, ಮಣೀಸರ, ಮಣಿಗಳು, ಕಾಳುಗಳು ಇಂಥವುಗಳಿಂದಲೂ, ಅಕ್ಷರಗಳನ್ನು ರಚಿಸಬಹುದಾದರೂ ಅವೆಲ್ಲಕ್ಕಿಂತಲೂ ಈ ಬಳೆಕಡ್ಡಿಗಳ ಕ್ರಮವು ಸುಲಭವಾಗಿರುವುದು.

ಯಾವಕೆಲಸವನ್ನು ಆರಂಭಿಸಿದರೂ ನಮ್ಮಲ್ಲಿ ಮೊದಲು ಸೂರ್ಯನಿಗೆ ವಂದನೆಯನ್ನು ಸಮರ್ಪಿಸಬೇಕಾದುದೂ, ಕೊನೆಯಲ್ಲಿ ಮಂಗಳವನ್ನು ಹೇಳಬೇಕಾದುದೂ ಸಹ ಅನಾದಿಯಾಗಿ ನಡೆದು ಬರುತಿರುವ ಆಚಾರವಾಗಿರುವುದಷ್ಟೆ ?

ಪ್ರಪಂಚದ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾದ ಸಮಸ್ತಶಕ್ತಿಗಳೂ ಸೂರ್ಯನಿಂದಲೇ ಉಂಟಾಗುವುದು. ಸೂರ್ಯನು ಆರೋಗ್ಯವನ್ನು ದಯಪಾಲಿಸುವ ದೇವರಾಗಿರುವನು. ಸೂರ್ಯನ ಶಕ್ತಿಯು ತಾಪ ಮತ್ತು ಬೆಳಕುಗಳಾಗಿ ಕಾಣಿಸಿಕೊಳ್ಳುವವು. ಸ್ಥಾವರಜಂಗಮಗಳ ಅಭಿವೃದ್ಧಿಗೆ ಈ ತಾಪ ಮತ್ತು ಬೆಳಕುಗಳು ಅವಶ್ಯತಮವು. ಸೂರ್ಯನಿಂದ ಮಳೆಯುಂಟಾಗುವುದು. ವಾಯುವು ಚಲಿಸುವುದು. ಭೂಮಿಯ ಮೇಲ್ಭಾಗವು ಒಣಗಿರುವುದು. ಗಾಳಿ, ನೀರು ಮತ್ತು ಭೂಮಿಗಳಲ್ಲಿ

Digitized by ROJA MUTHIAH RESEARCH LIBRARY

ರುವ ಕಶ್ಮಲಗಳು ಹೋಗುವವು. ಮತ್ತು ರೋಗಗಳಿಗೆ ಕಾರಣವಾದ ಅನೇಕ ಪರಮಾಣುಗಳು ನಾಶವಾಗುವವು. ಮಿತವಾಗಿ ಬಿಸಿಲು ತಗಲುತ್ತಿದ್ದರೆ ಎಂಥ ಪ್ರದೇಶದಲ್ಲಿಯಾದರೂ ಜನರಿಗೆ ಹಿತಕರವಾಗಿರುವುದು. ಬಿಸಿಲಿನ ಝಳಕ್ಕಿಂತಲೂ ಅದರಬೆಳಕು ಆರೋಗ್ಯಕ್ಕೆ ಹೆಚ್ಚು ಸಹಾಯಕರವಾಗಿರುವುದು. ಬೆಳಕಿಲ್ಲದಿದ್ದಲ್ಲಿ ಯಾವಕೆಲಸವೂ ನಡೆಯದು. ಹೀಗೆ ಪ್ರತ್ಯಕ್ಷಪರೋಕ್ಷಗಳಲ್ಲಿ ನಮ್ಮ ಸಮಸ್ತ ಸಂಪತ್ತುಗಳಿಗೂ ಕಾರಣಭೂತನಾಗಿರುವ ಆ ಮಹಾಮಹಿಮನಾದ ಸೂರ್ಯದೇವನಿಗೆ ನಾವು ಎಷ್ಟುವಂದನೆಗಳನ್ನು ಸಮರ್ಪಿಸಿದರೂ ಸಾಲದು. ಸೂರ್ಯನು ಉದಯಿಸಿದರೆ ಕಮಲಪುಷ್ಪಗಳು ಅರಳುವವು. ಮುಳುಗಿದರೆ ಮೊಗ್ಗಾಗುವವು. ನಮ್ಮ ಹೃದಯವೂ ಒಂದು ಕಮಲದಂತೆ. ಆದುದರಿಂದ ಇದೂ ಸಹ ಸೂರ್ಯನ ಉದಯಾಸ್ತಮಯಗಳಿಂದ ಅರಳುವ ಸಂಕುಚಿಸುವ ಸ್ಥಿತಿಯನ್ನು ತಪ್ಪದೆ ಹೊಂದುವುದು. ಪ್ರಾತಃ ಏಳುವ ಸ್ಥಿತಿಯೇ ಅರಳುವ ಸ್ಥಿತಿಯು. ರಾತ್ರಿ ಮಲಗುವಿಕೆಯೇ ಮೊಗ್ಗಿನಸ್ಥಿತಿಯು. ಅರಳುವ ಪುಷ್ಪವನ್ನು ಮೊಗ್ಗುಮಾಡುವುದನ್ನೂ, ಮೊಗ್ಗಾಗುತ್ತಿರುವುದನ್ನು ಅರಳಿಸುವುದಕ್ಕೂ ಯಾರಿಂದಸಾಧ್ಯವು. ಬಲಾತ್ಕಾರದಿಂದ ಹೂವಿನಂದವು ಕೆಡುವುದಲ್ಲವೆ? ಇದೇರೀತಿಯಾಗಿ ನಮ್ಮ ದೇಹವೂ ಸ್ವಾಭಾವಿಕವಾದ ಈ ಬದಲಾವಣೆಗೆ ಒಳಪಡದೆ ಹೋದಲ್ಲಿ ಆರೋಗ್ಯವು ಕೆಡುವುದಕ್ಕೆ ಸಂಶಯವೇನು. ಆರೋಗ್ಯವನ್ನು ಬಯಸುವ ಪ್ರತಿಯೊಬ್ಬನೂ ಕಾಲಕ್ಕೆಸರಿಯಾಗಿ ಏಳುವುದೂ, ಮಲಗುವುದೂ ಅವಶ್ಯತಮವು.

ಮೇಲಾಗಿ ಈ ಪುಸ್ತಕ ಪರಿಷ್ಕರಣಕಾರ್ಯವನ್ನು ಕೈಗೊಂಡು ಉಪಕರಿಸಿದ ಮೈಸೂರ್ ಗೌರ್ನಮೆಂಟು ನಾರ್ಮಲ್‌ಸ್ಕೂಲ್ ಕನ್ನಡ ಉಪಾಧ್ಯಾಯರು ಮತ್ತು ಕನ್ನಡ ಪಂಡಿತರು ವೇ|| ಎಸ್. ತಿಮ್ಮಪ್ಪಯ್ಯಶಾಸ್ತ್ರಿಗಳವರಿಗೂ ಮೈಸೂರು ಮಹಾರಾಣಿಯವರ ಕಾಲೇಜು ಸಂಗೀತಸಾಹಿತ್ಯವಿದ್ವಾನ್ ಬ್ರಹ್ಮಶ್ರೀ ವೇ|| ಸುಂದರಶಾಸ್ತ್ರಿಗಳವರಿಗೂ,

ಅತ್ಯಂತ ವಿಧೇಯತೆಯಿಂದ ವಂದಿಸುವೆನು

ಇತಿ—ಎಸ್ ಶ್ರೀಕಂಠಯ್ಯ.

NR N09

ಓಂ

# ವರ್ಣಗೀತೆ.

ಬೇಹಾಗು.] [ಏಕತಾಳ.

ಗ ಮ | ಪ ಮೊ$^{2}$ ಮಾ | ಗಾ ರಿ | ಸಾ |
ನ ಲ | ವಿ ನಿಂ ನೀ | ವೇ ಳೆ | ರೈ || ಪಲ್ಲವಿ ||

ನಿ ಸ | ಮ ಗಾ ಮ | ಪ ನೀ$^{2}$ ಧ | ಪಾ |
ಬೆ ಳ | ಗು ತಾ ನಿ | ಳೆ ಗಾ ದು | ದೈ || ಅನು| ಪಲ್ಲವಿ ||

ಗ ಮ | ಪ ನೀ ನಿ | ನಿ ನೀ ನಿ | ಸ ರೀ ನಿ | ಸಾ |
ಅ ರ | ಳು ವಾ ಕ | ಮ ಲಂ ಗ | ಳ ತಂ ದು | ನಾಂ |

ನಿ ಸ | ಗ ರೀ ಸ | ನಿ ಧಾ ಪ | ನಿ ಧಾ ಪ | ಪಾ |
ಮ ರ | ಳಿ ಮೊ ಗ್ಗ | ನು ಮಾ ಡು | ವು ದೆಂ ತು | ನೋ |

ಸ ನಿ | ಸ ಸಾ ರಿ | ಸ ನೀ ಧ | ಮ ಪಾ |
ಡ ರಿ | ಯ ಲಿಂ ತೆ | ಶ ರೀ ರ | ವು ತಾ |

ಗ ಮ | ಪ ನೀ$^{2}$ ಧ | ಪ ಮಾ ಪ | ಗಾ ರೀ |
ವ ರ | ಳ ಲೇ ಳ | ದೆ ಪೋ ಗೆ | ರೋ ಗಂ || ೧ ||

Digitized by ROJA MUTHIAH RESEARCH LIBRARY

ರಾಗ ಇಂಗ್ಲೀಷ್ ನೋಟ್.] [ತಾಳ.

ಸಾ ರಿ ಸಾ | ಸಾ ಸಾ | ಮಾ ಗ ರೀ | ರೀ ರೀ |
ಕೋ ಳಿ ಯಾ | ಕೂ ಗಿಂ | ವೇ ಳೆ ತಾಂ | ತೋ ರ್ಕುಂ |

ಪಾ ಮ ಗಾ | ಸಾ ರೀ | ನೀ ಸಾ ||
ಏ ಳು ತಂ | ನೋ ಡ ಲ್ | ಚಿ ತ್ರಂ ||

ಮೂಡಲ | ಲ್ಲೇರಿ | ಕಾಂತಿಯು | ಸೂರ್ಯಂ |
ಮೂಡುವಾ | ನಂದಂ | ಅಂದಂ ||
ಮೆಲ್ಲಮೆಲ್ಲ | ನೇಳುತಂ | ಮೇಲುಗಡೆ | ಗೇರುತಂ |
ಬೆಳಗುವ | ನದರಿಂ | ಮೂಡುವಾ | ನಂದಂ || ೧ ||

ನೋಡಲಾ | ಶ್ಚರ್ಯಂ | ಸೂರ್ಯನಾ | ಚರ್ಯಂ |
ಮೂಡಿತಾಂ | ಮಾಳ್ಪಂ | ಪಗಲಂ |
ಓಡೆತಂ | ಕಾಲಂ | ರಾತ್ರಿಯು | ಮೇಣ್ |
ಮೂಡಿತಾಂ | ಬರ್ಪಂ | ಪೋಪಂ |
ನಾಡಿಗೆಲ್ಲ | ಬೆಳಕಂ | ನೀಡುತಂತೆ | ಬೆಳಸಂ |
ಬೆಳಸುತ | ಚರಿಪಂ | ಮೂಡಿತಾಂ | ಬರ್ಪಂ || ೨ ||

ಆಯುರಾ | ರೋಗ್ಯಂ | ಸೂರ್ಯನಾ | ಭಾಗ್ಯಂ |
ಕಾಯುವಂ | ನಮ್ಮಂ | ನಿಚ್ಚಂ |
ಕಾಲವುಂ | ಸೂರ್ಯ | ನಿಂದಲೆ | ಏಳು |
ಗಂಟೆಗಾಂ | ಪೋಪೇಂ | ನಮಿಪೇಂ |
ಶಾಲೆಗಾನು | ಪೋಗುತಂ | ಬಾಲರೊಡ | ಗೂಡುತಂ |
ಕರವೆತ್ತಿ | ಬೇಡಲು | (ಏಳು) ಗಂಟೆಗಾಂ | ಪೋಪೇಂ || ೩ ||

———



ರಾಗ ಜುಂಜೋಟ] [ಆದಿತಾ.

(ರಾಜನೇಲಾಲಿಸ್ಯೆ) ಎಂಬಂತೆ.

* ಬೇಡುವೇಂ । ಸೂರ್ಯನೆ । ಜೋಡಿಸಿ । ಕಯ್ಯನು ॥ ಪ ॥
ಪಾಡುವೆ । ಶುಭಗಳ । ನೀಡಲು । ಲೋಕಕೆ ॥ ಅನುಪಲ್ಲವಿ ॥

ನೀನೆತಾಯ್ । ತಂದೆಯು । ನೀನೆಸಾ । ಭಾಗ್ಯವು ।
ನೀನೆಗುರುವುಬಂಧು । ನೀನೆಮ್ಮಪಾಲಿಸೆ ॥ ೧ ॥

ಈಶನೇ ಮಹಿಶೂ । ರೀಶಕ್ಷಿತೀಶನ ।
ದೇಶದೊಳೈಶ್ವರ್ಯ । ಸೌಶೀಲ್ಯವೀಯೆನೀ ॥ ೨ ॥
ಜೀಯಕೃಷ್ಣೇಂದ್ರನ । ಕಾಯುತಮೋದದೊ ।
ಳೀಯುತ ಕ್ಷೇಮ ಶ । ತಾಯುವ ಕರುಣಿಸೆ ॥ ೩ ॥

———

ರಾಗ ಹಿಂದುಸ್ತಾನೀ ಕಾಪಿ] [ತ್ರ್ಯಶ್ಯಲಘು.

(ಪಾರ್ಸಿನೋಟು)

† ಮಾ ಗ ಮ ಪಾ । ಮಾ ಗ ರಿ ಸರಿ ।
ದುಂ ಡ ನು ನೀ ವ್ । ನೋ ಡಿ ರಿ ಕೈ ।

---

## ಸೂ ಚ ನೆ .

* ದಿನಂಪ್ರತಿ ಮಕ್ಕಳು ಅಕ್ಷರಾಭ್ಯಾಸಕ್ಕೆ ಆರಂಭಿಸುವಾಗ ಈ ಹಾಡನ್ನು ಹೇಳಿಕೊಂಡು ಸೂರ್ಯ ನಮಸ್ಕಾರವನ್ನು ಮಾಡುವಂತೆಯೂ ಪಾಠಮುಗಿದವೇಳೆಯಲ್ಲಿ ಕೊನೆಯಲ್ಲಿರುವ ಮಂಗಳವನ್ನು ಹೇಳಿಕೊಂಡು ನಮಸ್ಕರಿಸುವಂತೆಯೂ ಅಭ್ಯಾಸಮಾಡಿಸಬೇಕು.

† ಗೋಳ, ವೃತ್ತ, ವಲಯ ಈ ಆಕೃತಿಗಳನ್ನು—ಆಯಾನುಡಿಗಳನ್ನು ಹೇಳುವಾಗ ಮಕ್ಕಳು ತಮ್ಮ ಕೈಯಲ್ಲಿ ಹಿಡಿದುಕೊಂಡು ತೋರಿಸುತಿರುವುದಲ್ಲದೆ ಈ ಮೂರು ಆಕೃತಿಗಳ ಪರಸ್ಪರ ಸಾಮ್ಯವೈಶಮ್ಯಗಳನ್ನು ಅವರೇ ಪರೀಕ್ಷಿಸಿ ತಿಳಿದುಕೊಳ್ಳುವಂತೆ ಮಾಡಬೇಕು.

Digitized by ROJA MUTHIAH RESEARCH LIBRARY

ಮ ಮ ಗ ರಿ ಸ ರಿ । ನೀ ಧ ಪಾ ||
ಕೊಂ- ಡ ವು ಗ ಳ । ಭೇ ದ ವ || ಪಲ್ಲವಿ ||

ಸ ಸ ನಿ ಸ ರೀ । ಸಾ ನಿ ಧ ಪಾ ।
ಚಂ- ಡಿ ವ್ರು ರೂ । ಪಾ ಯಿ ಗ ಳೂ ।

ರಿ ಮ ಮ ಪ ನಿ ಧ । ಮ ನಿ ಧ ಪಾ ||
ದುಂ ಡಿ ನ ಬ ಳೆ ಗ । ಳ ವೆ ನಿ ತೋ || ಅನುಪಲ್ಲವಿ ||

ಮ ಮ ಮ ಪ ಪ ಪ । [3]ನಿ ನಿ ನಿ ಸ ಸ ಸ ।
ಉಂ- ಡ ಲಿ ಗೆ ಯು । ಲಾ- ಡು ಬೆ ಲ್ಲ ।
[3]ನಿ ನಿ ನಿ ಸ ಸ ರಿ । ಸ ನಿ ಧ ಪಾ ||
ದುಂ- ಡೆ ಬೇ ಲ । ದ ಫ ಲ ವು || ೧ ||

ಕಾಸು । ಜಾಗ । ಟೆಯುಹ । ಪ್ಪಳವು ।
ದೋಸೆ । ಬಿಲ್ಲೆ । ಗಳಿಹವು || ೨ ||

ಬಳೆಯು । ಕೋಡ । ಬಳೆಯು । ವಲಯ ।
ಗಳಿವು । ಬಹಳ । ವಿಧಗಳು || ೩ ||

———

ರಾಗ—ಮೋಹನಕಲ್ಯಾಣಿ.] [ರೂಪಕತಾಳ.

(ಬನ್ನಿರಣ್ಣ ಬನ್ನಿರಣ್ಣ) ಎಂಬಂತೆ.

* ನೋಡಿರಯ್ಯ । ನೋಡಿರಯ್ಯ । ದುಂಡು ಈ ಬಳೆ || ಪ ||
ಕೋಡಬಳೆಯ । ಪಾಡನಂತೆ । ನೋಡಿಡಾಬನು || ಅಪ ||

---

* ಈ ಹಾಡನ್ನು ಹೇಳುವಾಗ ಮಕ್ಕಳು ಬೆರಳಿನಿಂದ ಬಳೆಯನ್ನು ತೋರಿಸ ತಿರುವುದಲ್ಲದೆ ಕೊನೆಯ ನುಡಿಯನ್ನು ಹೇಳುವಾಗ ಶರೀರದಲ್ಲಿ ಆಯಾ ಅವಯವಗಳನ್ನು ಮುಟ್ಟತೋರಿಸುತಿರಬೇಕು. ಇದೇರೀತಿಯಾಗಿ ಮಕ್ಕಳು ಅನುಕರಿಸಬೇಕಾದ ರೀತಿಯನ್ನು ಉಪಾಧ್ಯಾಯರು ಆಯಾ ಹಾಡುಗಳ ಅರ್ಥಾನುಸಾರವಾಗಿ ಊಹಿಸಿ ತಿಳಿಸಬೇಕು.



ಆದಿಯರಿಯೆ । ನಂತ್ಯಕಾಣೆ । ಮಧ್ಯವಿಲ್ಲವು ।
ಭೇದವೆಲ್ಲ । ಪೋದುದೆಂತು । ಮೋದನೋಡಿರಿ || ೧ ||
ಒಡೆದುಪೋಗೆ । ಪಡೆದಚೂರ । ಬಿಡದೆನೋಡಲೀ ।
ಬುಡವು ನಡುವೆ । ಕಡೆಯು । ತಾನೆ । ರಡದಿರುವುದೈ || ೨ ||
ಕರದಬಳೆಯು । ಕಾಲಬಳೆಯು । ಬೆರಳವಲಯವು ।
ಕರದ ಕಪ್ಪ । ದುಂಡಿವಿಂತು । ಬರೆಯೆ ಸೊನ್ನೆಯು || ೩ ||

———

ರಾಗ—ಬೇಹಾಗ್] [ಏಕತಾಳ.

* ನಿ ನಿ ನಿ ಧ । ಪ ಪ ಪ ಧ । ಮ ಮ ಮ ಪ । ಗಾ ।
ಉ ರು ಳು ತ । ಬ ಳೆ ಯಿ ದು । ಪ ರಿ ಯು ತ । ಲೀ ।

ಗ ಮ ಪ ನಿ । ಸ ಮ ಗ ರಿ । ಸ ಗ ರಿ ನಿ । ಸಾ ||
ಉ ರು ಳು ತ । ಗಾ- ಡಿ ಯ । ಗಾ- ಲಿ ಯ । ವ್ಹೋಲ್ ||

ಸ ಸ ಸ ರಿ । ನಿ ನಿ ನಿ ಸ । ಧ ಧ ಧ ಪ । ಧಾ- ।
ಉ ರು ಳು ವ । ಬ ರ ಲಿ ದು । ನಿ- ನ್ನೆ ಡೆ । ಗಂ- ।

ಗ ಮ ಪ ನಿ । ಸ ಮ ಗ ರಿ । ಸ.ಗ ರಿ ನಿ । ಸಾ- ||
ಮ ರ ಳು ತ । ಬ ರೆ ಮು ದ । ನ ನ್ನೆ ಡೆ । ಗಂ- || ೧ ||

———

---

* ತರಗತಿಯ ಬಾಲಕರನ್ನು ಎರಡುಭಾಗವಾಗಿ ವಿಂಗಡಿಸಿ ಒಂದು ಸಾಲಿನವರ ಇದಿರಿಗೆ ಇನ್ನೊಂದು ಸಾಲಿನವರು ಇರುವಂತೆ ಕ್ರಮವಾಗಿ ಕುಳ್ಳಿರಿಸುವುದು. ಒಂದು ಸಾಲಿನವರಿಗೆ ಬಳೆಯನ್ನುಕೊಟ್ಟು ತಮ್ಮ ಇದುರುಸಾಲಿನವರಿಗೆ ಒಡೆದುಹೋಗದಂತೆ ಮೆಲ್ಲಗೆ ಉರುಳಿಸುವಹಾಗೆ ಹೇಳುವುದು. ಪುನಃ ಅವರು ತಮ್ಮ ಇದಿರಿನಲ್ಲಿರುವವರಿಗೆ ಉರುಳಿಸುವುದು. ಈ ಆಟದಲ್ಲಿ ಸ್ವಲ್ಪವೂ ಗದ್ದಲವಾಗದಂತೆ ಜಾಗರೂಕತೆಯಿಂದ ನೋಡಿಕೊಳ್ಳಬೇಕು.



Digitized by ROJA MUTHIAH RESEARCH LIBRARY

ಇಂಗ್ಲೀಷ್‌ನೋಟ್ ಚತುರಸ್ರ] [ಏಕತಾಳ

* ಪಾ ಪಾ | ಪಾ ಗಾ | ಗಾ ಗಾ | ಗಾ ಸಾ |
ಓ ಡು | ತೀ ಗ | ಬ ಳೆ | ಯಾಂ ತು |

ಗಾ ರೀ | ಪಾ ಮ | ಮಾ ಗಾ | ಗಾ ರಿ |
ಪಾ ಡು | ತೆ ಲ್ಲ | ರು ರು ಳಿ | ಸು ತ್ತ |

ಸಾ ರೀ | ಗಾ ಪಾ | ಮಾ ರೀ | ರೀ ಸಾ |
ಲಾ ಡ | ಲೆಂ ತೊ | ಮೋ ದ | ವೀ ಗ || ೧ ||

ಓಡಿ | ಯೋಡಿ | ಯೀಗ | ಬಳೆ |
ಯಾಡಿ | ಯಾಡಿ | ಮನ | ಕೇನು |
ಬೇಡ | ವಾಗಿ | ಇರ್ಪು | ದಂತೆ || ೨ ||

ಮಾಡು | ತೀಗ | ತೊಟ್ಟಿ | ಲನ್ನು |
ನೋಡಿ | ಕಯ್ಯ | ಬೊಗ | ಸೆಯಿಂ |
ಪಾಡು | ತಿಂತು | ತೂಗು | ವೆವು || ೩ ||

———

* ಮಕ್ಕಳು ಬಳೆಯನ್ನು ಉರುಳಿಸಿಕೊಂಡು ಆಟವಾಡಿದ ನಂತರದಲ್ಲಿ ಬಳೆಗೆ ತುಂಬ ಆಯಾಸವಾಗಿರುವುದರಿಂದ ಕೈ ಬೊಗಸೆಯ ತೊಟ್ಟಿಲಿನಲ್ಲಿ ಮಲಗಿಸಿ ತೂಗಬೇಕೆಂಬುದನ್ನು ತಿಳಿಸುವುದು. ಹೀಗೆಯೇ ನಮಗೂ ಹಗಲೆಲ್ಲ ಕೆಲಸಮಾಡುತಿರುವುದರಿಂದ ಆಯಾಸವಾಗಿ ಮಲಗಿಕೊಳ್ಳುವಂತಾಗುವುದರಿಂದ ರಾತ್ರಿ ಮಲಗಿಕೊಳ್ಳುವೆವು. ಮಕ್ಕಳು ತೊಟ್ಟಿಲಿನಲ್ಲಿ ಮಲಗುವದು, ಪಕ್ಷಿಗಳು ಮರದಮೇಲೆ ಗೂಡಿನಲ್ಲಿ ಮಲಗುವವು. ದನಕರುಗಳೂ ಹೀಗೆಯೇ ಮಲಗುವವು. ಎಂಬುದನ್ನು ಈ ಸಮಯದಲ್ಲಿ ತಿಳಿಸಬಹುದು.



ರಾಗ:—ಶಂಕರಾಭರಣ] ನೋಟ್

(ಮಾವಿನ ತಳಿರಿದು ನೋಡಲ್ಕೆ) ಎಂಬಂತೆ.

ಗಾಗಸ ಗಾಗಸ ರೀರೀರೀ | ಗಪ ಮಗ ರಿಸ ನಿಪ ಸಾಸಾಸಾ ||
ಆಡುವ ಮಕ್ಕಳು ನಾವೆಲ್ಲ | ಆಡುವ ಆಟಕೆ ಬೆಲೆಯಿಲ್ಲ ||
ಪಾಪಗ ಪಾಪಗ ಪಪಧನಿಸಾ | ಸಾನಿಧಪಾಮಗ ರಿರಿ ಗರಿಸಾ ||
ಆಡದೆ ಮಯ್ಯಿಗೆ ಬಲವಿಲ್ಲ | ಕೂಡಲು ಸುಮ್ಮನೆ ಗೆಲವಿಲ್ಲ ||೧||
ಕೂಡುತ ಲೆಲ್ಲರು ನಿಲ್ಲುತ್ತ | ಪಾಡುತ ತೋಳ್ಗಳ ನೀಡುತ್ತ ||
ನೋಡುತ ಕೈಗಳ ಪಿಡಿಯುತ್ತ | ಸುತ್ತಲು ಸುತ್ತುವ ಗುಂಡಾಗಿ||೨||
ಮೆತ್ತಗೆ ಮೆಲ್ಲಗೆ ಒಟ್ಟಾಗಿ | ಸುತ್ತಲು ಸುತ್ತುವ ಗುಂಡಾಗಿ ||
ಚಿತ್ತಕ್ಕಾಗಲೆ ಆಟದಲಿ | ಹತ್ತಿತು ಹರ್ಷವು ಬೇಗದಲಿ ||೩||
ನಡೆಯಿರಿ ಕೈಗಳ ನೆಳೆಯುತ್ತ | ತಡೆಯದೆ ಕಾಲ್ಗಳ ಸಿರಿಸುತ್ತ ||
ಬಿಡದೆಯೆ ಎಲ್ಲರು ನಡೆಯುತ್ತ | ಸಡಗರದಿಂದಲೆ ಸುತ್ತುತ್ತ ||೪||
ಪಾಡುತಲೆಲ್ಲರು ಒಟ್ಟಾಗಿ | ಕೂಡುತಲೆಲ್ಲರು ಸರಿಯಾಗಿ |
ನೋಡುತ ಕೈಚಪ್ಪಾಳೆಯನು | ಮಾಡುತ ಬಿಡುವುದು ಕೈಗಳನು||೫||

———

ಮಕ್ಕಳ ಆಟಕ್ಕಾಗಿ ನಿಯಾಮಕವಾಗಿರುವ ಸ್ಥಳದಲ್ಲಿ ವಲಯಾಕಾರವಾಗಿ ಸುಣ್ಣ ಅಥವ ಟಾರಿನಿಂದ ಮೊದಲೇ ಗುರುತು ಮಾಡಿರುವುದು, ಈ ಗುರುತಿನ ಮೇಲೆ ಮಕ್ಕಳನ್ನು ನಿಲ್ಲಿಸುವುದು, ಪ್ರತಿಯೊಂದು ಮಗುವೂ ತನ್ನ ಬಲಗೈಯಿಂದ ಬಲಪಕ್ಕದವನ ಎಡಗೈಯ್ಯನ್ನೂ ಎಡಗೈಯಿಂದ ಎಡಪಕ್ಕದವನ ಬಲಗೈಯನ್ನೂ ಸರಿಯಾಗಿ ನೀಡಿ ಹಿಡಿದು ಅ ಗೆರೆಯ ಮೇಲೆ ಲಯಕ್ಕೆ ಸರಿಯಾಗಿ ಕಾಲುಗಳನ್ನಿರಿಸುತ್ತ ಸುತ್ತುವುದು, ಕೊನೆಯಲ್ಲಿ ಅರ್ಧವಲಯಾಕಾರವಾಗುವಂತೆ ಕೈಗಳನ್ನು ಮುಂದಕ್ಕೆ ಚಾಚಿ ಚಪ್ಪಾಳೆಯನ್ನು ಹೊಡೆದು ಅಟೆನ್‌ಷನ್ನಾಗಿ ನಿಲ್ಲುವುದು. ಇದರಿಂದ ಕೈಕಾಲುಗಳಿಗೆ ಸಾಧಕವೂ ಮನಸ್ಸಿಗೆ ಹರ್ಷವೂ ಆಗುವುದಲ್ಲದೆ ವಲಯಾಕೃತಿಯ ಅಭಿಪ್ರಾಯವು ಮಕ್ಕಳಿಗೆ ತಾನಾಗಿ ಗೋಚರಿಸಲನುಕೂಲವಾಗುವುದು.

Digitized by ROJA MUTHIAH RESEARCH LIBRARY

ರಾಗ:—ಹಿಂದಿನಂತೆ.

ಮೆಲ್ಲಗೆ ಕೂರುತ ಕೆಳಗಡೆಗೆ | ಎಲ್ಲರು ಹಲಗೆಯ ಕರತಳಕೆ |
ಕೊಳ್ಳುತ ಬಳಪವ ಪಿಡಿಯುತ್ತ | ಮೆಲ್ಲನೆ ಹಲಗೆಯೊಳೂರುತ್ತ ||೧||
ಸುತ್ತುತ ಸುತ್ತುತ ಬಳಪವನು | ಸುತ್ತಲು ಸುತ್ತಿಸಿ ಕೈಬಿಡದೆ |
ಸುತ್ತಲು ಸುತ್ತಲು ಗುಂಡಾಗಿ | ಸುತ್ತಲು ಸೊನ್ನೆಯು ಗೆರೆಯಾಗಿ೨||
ಸೊನ್ನೆಯು ಗಾಲಿಯ ಸುತ್ತಿನೊಲು | ಸೊನ್ನೆಯು ಗುಂಡಿನ ತಿರುವಿನೊಲು ||
ಸೊನ್ನೆಯು ಚಕ್ರದ ಅಂಚಿನೊಲು | ಸೊನ್ನೆಯು ಮೇಟಿಯ ಸುತ್ತಿನೊಲು ||೩||
ಸೊನ್ನೆಯ ನೋಡಲು ಬುಡವಿಲ್ಲ | ಸೊನ್ನೆಯ ನೋಡಲು ಕಡೆಯಿಲ್ಲ |
ಸೊನ್ನೆಯ ನೋಡಲು ನಡುವಿಲ್ಲ | ಸೊನ್ನೆಯದೊಂದೇಗೆರೆಯೆಲ್ಲ||೪||
ಸೊನ್ನೆಯ ಪೋಲಿದೆ ಕಯ್ಯ ಬಳೆ | ಸೊನ್ನೆಯ ಪೋಲಿದೆ ಕಾಲಬಳೆ |
ಸೊನ್ನೆಯ ಪೋಲಿದೆ ಕೋಡಬಳೆ | ಸೊನ್ನೆಯ ಪೋಲಿದೆ ಉಂಗರವು||

---

ಮಕ್ಕಳು ಅಂದವಾಗಿ ವಲಯವನ್ನು ಬರೆಯುವಂತಾಗಬೇಕಾದುದು ಅವಶ್ಯಕವು ಇದಕ್ಕಾಗಿಯೇ ಈ ವಿನೋದಗಳನ್ನೇರ್ಪಡಿಸಿರುವುದು, ಬಂಡಿಯ ಗಾಲಿ, ಬೀಸುವ ಕಲ್ಲು, ಗಾಣದ ಎತ್ತು, ಕುಲಾಲ ಚಕ್ರ ಇವುಗಳು ಹೇಗೆ ಸುತ್ತುವುವೆಂಬುದನ್ನೂ ಹಿಂದಿನ ಆಟದಲ್ಲಿ ತಾವು ಹೇಗೆ ಸುತ್ತಿದ ರೆಂಬುದನ್ನೂ ಸರಿಯಾಗಿ ಅನುಕರಿಸಿ ತಿಳಿದು ಅದರಂತೆ ತಾವು ಬಳಪ ಅಥವ ಸುಣ್ಣದಿಂದ ಒಳ್ಳೆಯ ನೆಲ ಇಲ್ಲವೇ ಹಲಗೆಯ ಮೇಲೆ ಸ್ವಲ್ಪ ಊರಿ ಸುತ್ತಿಸಿ ಸೊನ್ನೆಯ ಆಕಾರವನ್ನು ಮಾಡುವುದು. ಓರೆ ಕೋರೆಗಳಿಲ್ಲದಂತೆ ಸೊನ್ನೆಯನ್ನು ಬರೆಯುವುದು ಬರುವವರೆಗೂ ಅಕ್ಷರ ವಿಷಯಕವಾದ ಪಾಠಗಳನ್ನಾರಂಭಿಸದಿರಬೇಕು.



ಇಂಗ್ಲಿಷ್ ನೋಟು.] [ತ್ರಿಸ್ರಲಘು.

* ಮ ಮ ಮ ಮ ಪ ಧ | ಧಾ ಪ ಮಾ |
ಮ ಲ ಗು ಮ ಲ ಗು | ಬ ಳೆ ಯೆ ಲೆ |

ಧ ಧ ಧ ಧ ನಿ ಸ | ಸಾ ನಿ ಧಾ |
ಮ ಲ ಗು ಮ ಲ ಗು | ಕೈ ಯೊ ಳೆ |

ಪ ಮೆ ಪ ನೀ ಪ | ಮಾ ಪ ಧಾ |
ತೂ ಗು ತಿ ಂ ತು | ಪಾ ಡು ವೆ |

ಧ ಪ ಮ ಸಾ ನಿ | ಧಾ ಪ ಮಾ |
ಬೇ ಗ ನಿ ದ್ದೆ | ಮಾ ಡೆ ಲೇ |

ಸಾ ಧ ಮಾ | ಸಾ ಧ ಮಾ |
ತೂ ಗು ವೇಂ | ಪಾ ಡು ವೇಂ |

ಧ ಪ ಮ ಸಾ ನಿ | ಧಾ ಪ ಮಾ |
ಬೇ ಗ ನಿ ದ್ದೆ | ಮಾ ಡೆ ಲೇ ||೧||

---

* ಹಿಂದಿನಂತೆ ಮಕ್ಕಳು ಎಡ ಅಂಗೈಯಲ್ಲಿ ಬಳೆಯನ್ನಿಟ್ಟು ಬಲಗೈಮುಚ್ಚಿಕೊಂಡು ಎಡಕ್ಕೂ ಬಲಕ್ಕೂ ಈ ಹಾಡನ್ನು ಹೇಳುತ್ತಾ ಗದ್ದಲವಾಗದಂತೆ ತೂಗುತ್ತಿರಬೇಕು. ಈ ಸಮಯದಲ್ಲಿ ಜೋಗುಳದ ಹಾಡನ್ನು ಹೇಳುತ್ತಾ ತೂಗುತ್ತಿದ್ದರೆ, ಮಕ್ಕಳು ಅಳುವುದನ್ನು ಬಿಟ್ಟು ಹಾಗೆಯೇ ತೊಟ್ಟಿಲಿನಲ್ಲಿ ಮಲಗಿಕೊಳ್ಳುವವೆಂಬುದನ್ನು ತಿಳಿಸಬಹುದು. ಹೀಗೆಯೇ ಆಯಾಸಂದರ್ಭಗಳಿಗನುಗುಣವಾಗಿ ವಿಷಯಗಳನ್ನು ಉಪಾಧ್ಯಾಯರು ಊಹಿಸಿ ಬೋಧಿಸುವುದವಶ್ಯವು.

Digitized by ROJA MUTHIAH RESEARCH LIBRARY

ತೋಡಿ] [ರೂಪಕತಾಳ.

(ಪರಿಪಾಲಯಮಾಂ) ಎಂಬಂತೆ.

* ವಲಯಾಕೃತಿಯಾ | ಬಳೆಯನ್ನಳೆಯುತ || ಪ ||
ಸಲೆಮಾಡಲು ನೀ | ನಳೆದೆರಡಾಗಿ || ಅ|ಪ ||
ಅರೆಚಂದ್ರನುತಾ | ಸರಿಯರೆಬಳೆಗೆ |
ಬರೆನೀನಿದರಂ | ತರಿಯೊಂದಿದೆನುತ || ೧ ||
ಅರೆಯೀಯೆರಡಾ | ಕೊರೆದರ್ಧವೆನಿಸೆ |
ಚರಣಂಗಳುತಾ | ವೆರಡರಡಹವು || ೨ ||
ಬಂದೀಪದನಾ | ಲ್ಕೊಂದುಗೂಡಲುತಾ |
ನೊಂದುವರಯವಾ | ಗಂದದಿಂ ಮೆರೆಗುಂ || ೩ ||

---

ಭೈರವ] [ಏಕತಾಳ

ರಿ[1], ಗ[2], ಧ[1], ನಿ[2]

† ಧಾ ಧ ಪಾ ಗ ಮ | ಪಾ ನಿ ಧಾ | ಪ ಮಾ ಪ ಮ |
ನೋ ಡಿ ನೇ ರ ಏ | ದೊ ಂ – ದು ಲೆ ೯ ಖ ಣಿ |
ಗಾ ರಿ ಸ ರಿ ಗ ಮ | ಗಾ ರಿ ಸಾ |
ಯಂ ತೆ ಸೀ – ಸ ದ | ಕ ಡ್ಡಿ ಯು ||

---

* ಆಯಾ ನುಡಿಗಳ ಅರ್ಥಕ್ಕೆ ಅನುಸಾರವಾಗಿ ಬಳೆಯನ್ನು ಮಕ್ಕಳೆದುರಿಗೆ ಒಡೆದು ತೋರಿಸುತ್ತಲೂ, ಸೇರಿಸಿ ಅರ್ಧ ಪೂರ್ಣಗಳನ್ನು ಮಾಡುತ್ತಲೂ ಇರಬೇಕು.

† ಬಳೆಯೂ ಬಳೆಯಚೂರುಗಳೂ ವಕ್ರವಾಗಿರುವುವು. ಸರಳಾಕೃತಿಗಳೆಲ್ಲಾ ನೇರವಾಗಿರುವುವು. ಎಂಬುದನ್ನು ಮಕ್ಕಳೇಪರೀಕ್ಷಿಸಿ ತಿಳಿಯುವಂತೆ ಮಾಡಬೇಕು.



ಧಾ – ಧ ನೀ ನಿ ನಿ | ಸಾ ಸ ಸಾ ರಿ ಸ |
ನೋ ೯ ಡೆ ನೇ ರ ವು | ಚಿ ತ್ರ ವೆ ಲ್ಲ ವು |
ನೀ – ಧ ಪ ಧ ನಿ ಸ | ನಿ ಧ ಪಾ ಧಾ ಮಾ ಪಾ ||
ದೀ ಪ ಹ – ಚ್ಚು ವ | ಕ – – – ಡ್ಡಿ ಯು ||
ನೋಡೆನೇರವು | ಹಂಚಿಹುಲ್ಲಿನ |
ಕಡ್ಡಿಯೂಬಳ | ಪಂಗಳೂ ||
ನೋಡಿನೀಂಬರೆ | ಯಲ್ಕರೇಖೆಯು |
ನೇರವಾಗಿಯೆ | ತೋರ್ಪುದು || ೧ ||

---

ಜುಂಜೋಟಿ] [ಏಕತಾಳ

(ಬಾಬಾಬನ್ನೀರಿ ಹೋಗೋಣಬೇಟಿಗೆ) ಎಂಬಂತೆ,

* ಆಹಾ | ನೋಡಯ್ಯ | ನೋಡಯ್ಯ | ಆಟವ || ಆಹಾ || ಪ||
ಮಿದುವಾದ | ಕಯ್ಯೊಳೆ | ಮುದದಿಂದ ರಚಿಪುದ ||
ಹದವಾದ | ಕಡ್ಡಿಯ | ಮುದವೀವ ಬಳೆಗಳ || ೧ ||
ಕೆಳಗೊಂದು | ಬಳೆಯನು | ಮೇಲೊಂದು ಕಡ್ಡಿಯ ||
ಬಲಕೊಂದು | ಪಾದವ | ಮೇಲಾಗಿ | ಇಡೆರವು || ೨ ||
ಜತೆಯಾಗಿ | ಬಾಲರು | ಜತೆಮಾಡಿದವನ್ನು |
ಜತೆಗೊಬ್ಬರಿಲ್ಲದ | ದತಿಯೂ | ಗಿ ಅಳುವುದ || ೩ ||

---

* ಅಕ್ಷರಗಳನ್ನು ರಚಿಸುವಾಗ ಪ್ರತಿಯೊಬ್ಬ ಹುಡುಗನಲ್ಲಿಯೂ ಇರಬೇಕಾದ ಸಾಧನಗಳು :—ಬೇರೆಬೇರೆ ಮೂರುಪರಿಮಾಣದ ಬಳೆಗಳು. ಅವುಗಳ ಅರ್ಧ ಮತ್ತು ಕಾಲುಭಾಗಗಳು ಮತ್ತು ಪ್ರತಿಪೂರ್ಣವಲಯಗಳ ವ್ಯಾಸದಷ್ಟು ಉದ್ದವುಳ್ಳ ಕಡ್ಡಿಗಳು ಸಾಮಾನ್ಯವಾಗಿ ಒಂದೆರಡು ಮಾತುಗಳನ್ನು ರಚಿಸಲು ಯಾವತುಂಡುಗಳೂ 6 ಕ್ಕಿಂತ ಹೆಚ್ಚಿಗೆ ಬೇಕಾಗದು. ಒಟ್ಟು ಅಕ್ಷರದ ಅಂದದಮೇಲೆ ಇಂಥ ತುಂಡು ಇಂಥ ಕಡೆಯೇ ಇರಬೇಕೆಂದು ತಾನಾಗಿಯೇ ಗೋಚರವಾಗುವುದು.

Digitized by ROJA MUTHIAH RESEARCH LIBRARY

ಕಮಾಚು]　　　　　　　　　　[ಆದಿತಾಳ.

(ಮಾಮಮೋಹ ಮಾರಮಣ) ಎಂಬಂತೆ.

* ಬಾಲರೆಲ್ಲ ವರ್ಣಗಳ | ರಚಿಸುವ || ಪಲ್ಲವಿ ||
ಪೋಳಿವ | ಬಳೆಯ | ಸರಳು | ಗಳನಿ | ರಿಸಿ || ಅಪ |

## ರ

ಕಡ್ಡಿಯ ಬಲರೆ | ಒಡ್ಡುತೆ ಪದವ |
ಕೆಳಗೆ | ಮಡಗೆ | ಒಳೆಯ | ಬರುವುದೆ ರ || ೧ ||

## ಕ

ಜೋಡಿಸಲಡಿಗೆ | ನೋಡಿಸರಳವ |
ಬಿಡದೆ | ಬಳೆಯ | ನಡಿಗೆ | ಮಡಿಗೆ | ಕವು || ೨ ||

## ಕ ರ

ಪಾಡುತಬಲಕೆ | ಜೋಡಿಸೆರವನು |
ಕರವು | ಕರದ | ಪೆಸರ | ಸೊರೆಯು | ವುದು || ೩ ||

---

ಹಿಂದುಸ್ಥಾನಿ ಕಾಪಿ]　　　　　　　　　　[ಆದಿತಾಳ.

(ಮೋಹಿನಂದ ಗೋಪಬಾಲ) ಎಂಬಂತೆ.

ಇದೊ || ಬಂದು ಒಂದು ಗೂಡಿ ಪಾಡಿ || ಪಲ್ಲವಿ ||
ಪದಗಳ | ನಿಡಿಸ | ವಿದೊಮಾಡಿ || ಅ| ಪ ||

---

* ಪದವ—ಕಾಲುಬಳೆಯ ಚೂರನ್ನು ಹೀಗೆಯೇ ಅರ್ಧಬಳೆಗೆ ಅರೆ ಎಂದೂ.
ಕಡ್ಡಿಗೆ—ಸರಳವೆಂದೂ, ಅರ್ಥಮಾಡಿಕೊಳ್ಳಬೇಕು.



## ಸ

ಅರೆಗೊಂಡಿ ಪಾದವು | ಶಿರಕಿರೆ |
ರಕಾರ | ಸಕಾರ | ದಾಕಾರ | ಬರುವುದು || ೧ ||

(ಬಾಲರೆಲ್ಲ ವರ್ಣಗಳ) ಎಂಬಂತೆ,

ನೋಡಿ ಮಾಡಿ ಪಾಡಿದರೆ | ಬಗೆಬಗೆ || ಪ ||
ಸರವು | ಕಸವು | ರಸವು | ಸರಸರವು || ಅ ಪ ||
ತುಂಡುಬಳೆಗಳು | ದುಂಡುಬಳೆಗಳು |
ಸರಳ | ಗಳಿವು | ಕಲೆಯೆ | ಪದಗಳಿವು || ೧ ||

## ನ

ತೋರುತಲಿರುವ ಸ | ಕಾರದ ಬಳೆಯ |
ಹಿರಿದು | ಬರುವ | ಪರಿಯ | ಪರಿಕಿಸೆ ನ || ೨ ||

## ಕ ನ ಕ

ಬಂದಿರುವಿದಕೆ | ಸಂದಿಸಲೆಡದ |
ಕೆಲದೆ | ಬಲದೆ | ಕವನು | ಕನಕ ವದೆ || ೩ ||

---

ಸಾಂಗತ್ಯ.

(ಹಾಲನುಕೊಡುತೆನ್ನ) ಎಂಬಂತೆ.

## ಗ

ಕಡ್ಡಿಯನಿರಿಸಿರಿ | ಅಡ್ಡಗೆ ಬಲಗಡೆ |
ಒಡ್ಡಿರಿ ಬಳೆಯ ಪದವೊಂದ |

Digitized by ROJA MUTHIAH RESEARCH LIBRARY

ದುಂದಡಿಗಿಡೆರವು | ಖಂಡಿಸಿರವನು ಕೆಳ |
ತುಂಡೊಂಡ ಕಳೆಯೆ ಗಕಾರ || ೧ ||

## ಗ ರ ಗ ಸ

ಒಂದೀಗಕಾರದ | ಮುಂದಾರಕಾರವ |
ನಿಂದಿರೆ ಒಳಿಕ ಗ ಕಾರ ||
ಸಂದಿಸೆ ನೀಸಂತ್ಯ | ಕೊಂದೆ ಸಕಾರವ |
ತಂದಿಡೆ ನುಡಿ ಗರಗಸವು || ೨ ||

## ಸ ರ ಸ ರ

ಸರಸರನೆ ಕೊಯ್ಯುತೆ | ಗರಗಸದಿಂಡಲೆ |
ಮರಗಂಬ ಮಾಡ ಬಹುದಯ್ಯ ||
ಸರ ತೊಲೆ ಕದಗಳ | ತ್ವರಿತದಿ ಮಾಡುತೆ |
ಮನೆಯನ್ನು ಕಟ್ಟಬಹುದಯ್ಯ || ೩ ||

## ಈ

ಈರದಮೇಲೆಡೆ | ಬೇರೊಂದುಕಡ್ಡಿಯ |
ಹೇರುತಲೊಂದುಂಗುರವನ್ನು ||
ಏರಿಸಿ ಮುಂದಕೆ | ಬೇರೊಂದುಕಡ್ಡಿಯ |
ಕೂರಿಸಲೆಡಕೆ ಈ ಯಹುದು || ೪ ||

## ಹ

ಸೇರೆ ರಕಾರಕೆ | ಬೇರೊಂದು ದುಂಡು ಹ |
ಕಾರವಡಂದೇ ಒರುವದು ||



ಸೇರೆ ಹಕಾರಕೆ | ಬೇರೆ ಸ ಮುಂದಕೆ |
ಕ್ಷೀರವಸೀವ ಹಸವಹುದು || ೫ ||

## ಆಗ

ಒಂದರೆಯ ತುದಿಗೆ | ತಂದೆರಡುಂಗುರವ |
ಸಂದಿಸುತೊಳಗೆ ತುಂಡೊಂದ ||
ಪೊಂದಿಸಿಪಾಸುತೆ | ಮುಂದೆ ಗಕಾರವ |
ತಂದಿಡೆ ಆಗ ಎಂದಹುದು || ೬ ||

## ಟ

ಬಳೆಯುರೆಯ ಸರಳವ | ಕಳೆಯುತಲುಳಿದಿರುವ |
ಬಳೆಗಳ ಮೇಲೆ ಪದವೆರಡ ||
ಕೆಳಗಡೆಗೆರಡರ್ಧ | ಬಳೆಗಳನಿರಿಸುತ |
ಕಲಿಯಿರ ಟವುಬಂದಿಹುದು || ೭ ||

## ಣ

ತಲೆಕೆಳಗುಮಾಡಿ | ಒಲಗಡೆಯ ತುಂಡನು |
ಚಲಿಸಲು ಣ ವುಬಹುದಯ್ಯ ||
ಒಲವಿನಿಂ ಪಾಡುತೆ | ಬಳೆಗಳಿಂ ರಚಿಸುತೆ |
ಹಲಗೆಯಮೇಲೆ ಬರೆಯಯ್ಯ || ೮ ||

## ತ

ಅರೆಬಳೆಯ ಬಲತುದಿಗೆ | ಕಿರುಬಳೆಯನಿರಿಸುತಲಿ |
ಚರಣವನಿಲ್ಲಿಸೆ ಮೇಲೆಡೆಗೆ ||



Digitized by ROJA MUTHIAH RESEARCH LIBRARY

ಶಿರದೊಳುಪಾಸುತ | ಸರಳವ ಬಲಕೆಲಕೆ |
ಚರಣವನಿಡಲದೆ ತಕಾರ || ೯ ||

# ಠ

ಇರಿಸಿ ರಕಾರವ | ನಿರಿಸಲು ಒಳಗಡೆಗೆ |
ಕಿರುಬಳೆಯದುವೆ ಠಕಾರ ||
ಇರಿಸುತಲೆಡಗಡೆ | ಗೊರೆವ ಹಕಾರವ |
ನರಿವುದು ನೀವು ಹಠವೆಂದು || ೧೦ ||

---

ಯಮುನಾ ಕಲ್ಯಾಣಿ] [ಆದಿತಾಳ.

(ಗರಪುರನಾಯಕಪಾಹಿ) ಎಂಬಂತೆ.

ಎಳೆಯರೆ ಜೋಡಿಸಿಬೇಗ || ಪ ||
ಬಳೆಗಳನಿರಿಸುತಲೀಗ ||ಅ| ಪ ||

# ಖ

ಬಳೆಯೆರಡಿಗೆ ಖವು | ಬಲಗಡೆ ಚರಣವ |
ಕೆಳಗಡೆ ಗರೆಯನು | ತಲೆಗಾಪಾದವ || ೧ ||

# ಖು

ಬಲದಾಪರಿಯೊಳು | ಮುಂದಕೆ ರಚಿಸುತ |
ತಲೆಗೊಂದಿಸು | ತಲೆಕಟ್ಟನು || ೨ ||



# ಖೂ

ಶೇರಿಸುತರ್ಧವ | ಪಾದವಮುಂದಕೆ |
ದೂರಿಸೆ ದುಂಡನು | ದೀರ್ಘವು || ೩ ||

# ಋ

ಋಕಾರದ||

ಆದಿಯಬಳೆಗಳ | ಪಾದವತೆಗೆಯುತ |
ಮೋದದಿಶೇರಿಸು | ದುಂಡನು || ೪ ||

# ಝ

ನಡುವಣ ತಲೆಯನು | ಎಡಗಡೆಗೆಳೆಯುತ |
ಅಡಿಯೊಳು ಬಲಕಿಡು | ತುಂಡೊಂದನು || ೫ ||

---

ನಾದನಾಮಕ್ರಿಯ] [ಏಕತಾಳ

(ಕೇಳು ರಾಜೇಂದ್ರನೇ) ಎಂಬಂತೆ.

ಕೂಡಿ | ಪಾಡೀರೆಲ್ಲಾ |
ನೋಡುತ ಮೋದದಿ ಜೋಡಿಸುತ || ಪ ||

# ಕ್ಷ

ಒಂದು ದುಂಡು ಮೇಲಿ |
ನ್ನೊಂದು ದುಂಡು ಕೀಳೆ | ಬಲದಿ ||
ಪೊಂದೆ ಮಧ್ಯ ಕತ್ತರಿಯೊ |
ಲಂದವಾಗಿ ಜೋಡಿಪಾದ || ೧ ||

Digitized by ROJA MUTHIAH RESEARCH LIBRARY

ನೋಡಿಮೇಲೆ ತಲೆಕಟ್ಟ |
ಕೂಡೆ ಶ ವು | ಬಂದುದೀಗ |
ಜೋಡಿಪಾದ ಕೀಳೆಮೇಲೆ |
ಮಾಡೆ ಳ ವು | ತಾನದೀಗ || ೨ ||

---

ಶಾಮಕಲ್ಯಾಣಿ] [ಆದಿತಾಳ.

(ಛಂದವೇ ನಿಮಗರತಿ) ಎಂಬಂತೆ.

ಬಾರೆಲೊ ಬಾಲನೇ | ತೋರುವುದನು ನೋಡೊ || ಪ ||
ಸಾರುತೆ ತೋರಿ ಕೊಡೆ | ದಾರಿಗೆಡಿಸದಿರು || ಅಪ ||

ಲ

ಪಾಡುತೆ ದುಂಡಿಗೆ | ಜೋಡಿಸುತರೆಯನು |
ಕೂಡಿ ಪಾದವಮೇಲೆ | ನೋಡೆ ಲ ಕಾರವು || ೧ ||

ಅ

ಚರಣವ ನೂಕಿದ್ದುಂ | ಡರೆಯನು ಮಡಗುತ |
ಸರಳವನೊಳಗಿಡೆ | ಬರುವುದಕಾರವು || ೨ ||

ಉ

ಬಳೆಯರೆ ಸರಳವ | ಕಳೆಯುತ ಬಲಗಡೆ |
ಬಳೆಯರೆ ಯೆರಡನು | ತಲೆಗಿಡುಪಾದವ || ೩ ||

ಊ

ಚರಣವನೂಕುತ | ಅರೆಯಿಡು ತಡಿಯೊಳು |
ಚರಣವಕೂಡಿಸಿ | ಕಿರುಬಳೆ ಜೋಡಿಸು || ೪ ||

Digitized by ROJA MUTHIAH RESEARCH LIBRARY



ಶಹನ] [ಆದಿತಾಳ.

(ರಾರಾಜಿಪನೀ ಭೂಪನು) ಎಂಬಂತೆ.

ನೋಡಿದುಂಡನು | ತುಂಡನು | ಇದೊ |
ಕೂಡೆಬರ್ಪುದು | ವರ್ಣವು || ಪ ||

ಪಾಡುತಲಿವುಗಳ | ಕೂಡಲುರಚಿಸಿ |
ನೋಡಿಬರೆಯೆತಾ | ನೋಡೆ ಬೇಸರವು || ಅಪ ||

ಡ

ಇಟ್ಟಿರಡರೆಯ | ಪದಂಗಳ | ತುದಿ |
ಗಿಟ್ಟು ಮೇಲ್ತಲೆ | ಕಟ್ಟಿಡು ||

ಢ

ಪುಟ್ಟನೆ ಸರಳವ | ನಿಟ್ಟರೆ ಕೆಳಗೆ |
ಪುಟ್ಟುವುದಿದೆ ಢ ವು | ಘಟ್ಟಿಯೊಳಿದನೊರೆ || ೧ ||

ಢ

ಕಂದನೆನೀನೊಂ | ದುಂಗುರ ವನು |
ತಂದುಜೋಡಿಸು ಮಧ್ಯದೆ ||

ಢ

ಅಂದದವುಂಗುರ | ಪೊಂದಿರೆ ಬಲದಲಿ |
ಚಂದದಲೊಳಗದ ನಿಂದೂರೆಯಲು ಢ ವು || ೨ ||

## ಡ

ಲೀಲೆಯಿಂದಲಿ ಬಾಲನೆ | ಕೀಳೊಳಿರ್ದಪ ಸರಳವಂ |
ಕೀಳುತಲೀಗಲೆ | ಕಾಲವಕಳೆಯದೆ |
ಯಾಲಿಸಿಮಾತನು | ಪೇಳಿದ ಡ ವೆಂದು || ೩ ||

---

ಜಂಗಲಾ] [ಆದಿತಾಳ.

(ನೀಲಕಂಠ ಪದ) ಎಂಬಂತೆ.

## ಒ

ಇರದೀತಲೆಯಂ | ಹಿರಿದು ಪಾದವನು |
ತಿರುಗಿಸುತೆಡಕಿಂದು ||
ಕಿರುವಲಯವನೀ | ನಿರದೆಡಕಿಡಲೊಪ್ಪು |
ಚರಣವಬಿಡೆ ಬಲದಾ || ೧ ||

## ಬ

ಚರಣವಪೊಂದಿಸು | ತೊರೆಯೆ ಬ ಕಾರವು |

## ಜ

ಅರೆಯನು ಮೇಲೆಡೆಗೆ ||
ಇರಿಸುತ ಚಲಿಸಲು | ಚರಣವ ಬರುವುದ |
ನೊರೆಯೊ ಜ ಕಾರವಿದು || ೨ ||

## ಒ ಬ

ಬಿಡೆಮೇಲರೆಯನು | ಸಡಗರದಿಂದಲೆ |
ಕಡೆಗುಳಿವು ದೊ ಕಾರ ||



ಬಿಡದದೆ ಚರಣವ | ನಡರಿಸಿ ಬಲಗಡೆ |
ಗಿಡಲಿದುವೆ ಬ ಕಾರ || ೩ ||

## ಭ

ಇರದೀವರ್ಣದ | ಶಿರದೆಡೆಗಿರಿಸುತ |
ಮೆರೆಯುವ ತಲೆಕಟ್ಟ ||
ಸರಳವನಡಿಗಿಡು | ತೊರೆಯೆ ಭ ಕಾರವು |
ಬರೆದಿದ ತೋರಿಸಿರಿ || ೪ ||

## ಓ

ಇರಿಸಲೊಕಾರದ | ಶಿರದೊಳು ನಿಲ್ಲಿಸಿ |
ಸರಳವ ಮೇಲೆಡೆಗೆ ||
ಕಿರುಬಳೆಯರೆಯಿಡು | ಬರೆತುದಿ ಬಲಗಡೆ |
ಬರೆಯೋಕಾರವಿದು || ೫ ||

## ಔ

ಶಿರದೆಡೆಯವಹಿರಿ | ದರೆಯದ ನಿಲ್ಲಿಸಿ |
ಸರಳವಪಾಸುತಲಿ ||
ಚರಣವ ಕೆಳಗಡೆ | ಸರಳವ ಬಳೆಯನು |
ಇರಿಸಲು ಔ ಬಹುದು || ೬ ||

## ಚ

ಇಡುತಲೊಕಾರದ | ಕಡೆಯೊಳು ಸರಳವ |
ನಡರಿಸಿ ಪಾಸುತಲಿ ||

Digitized by ROJA MUTHIAH RESEARCH LIBRARY

ಸಡಗರದಿಂತಲೆ | ಗಡರೆ ರಕಾರವು |
ಬಿಡದೆ ಜ ಕಾರವಿದು ॥ ೭ ॥

## ಖ

ಕಳೆದು ಭಕಾರದ | ತಲೆಕಟ್ಟನುನೀ |
ಕೆಳಗಣ ಸರಳವನುಂ ॥
ತಲೆಯನು ಎಡದಲಿ | ಯೊಳಗಡೆಗಿಡೆಪದ |
ವಳಿಯೆಲೆಕಾರವದು ॥ ೮ ॥

## ವ ಮ

ಬರೆತಲೆಕಟ್ಟದ | ಕೊರೆವ ವ ಕಾರವು |
ಬರೆಯೆ ಮ ಕಾರವನು ॥
ಅರೆಯೆನು ಬಲಗಡೆ | ಗಿರಿಸುತ ತುದಿಗೆ |
ಜರಣವನೇರಿಪುದು ॥ ೯ ॥

## ಪ ಷ

ಇರಿಸೆ ವಕಾರದ | ತಿರದೆಡೆಯಡಿಯೊಳು |
ಕಿರುಬಳೆಯ ಪ ಕಾರ ॥
ಸರಳವ ಬಲಗಡೆ | ಗಿರಿಸುತಲಡಿಯೊಳು |
ಬರೆಯೆ ಷ ಕಾರವಿದು ॥ ೧೯ ॥

## ಫ ಘ

ಇಡುತ ಪಕಾರವ | ನಡಿಯೊಳು ಸರಳವ |
ನಿಡೆ ನಡುವೆ ಫ ಕಾರ ॥



ಇಡಲಿದ ಕರೆಬಳೆ | ಯಡರಿಸಿ ಬಲಗಡೆ |
ಯೆಡೆಗಿದುವೆ ಘ ಕಾರ ॥ ೧೧ ॥

---

_ ಜಲಾಪ್] [ಆದಿತಾಳ.

(ಭಾಗೀರಥಿ ಮಹಾಭಾಗೆ ಎಂಬಂತೆ.)

ತೋರುವೆಕಾರಕೆ | ಸೇರಿಸೆ ಬಳೆಗಳ |
ಬೇರಹವರ್ಣಗಳ್ | ತೋರುತಲಿಹವು ॥ ೧ ॥

## ಏ ಐ

ಅರೆಯನು ಶಿರದೆಡೆ | ಗಿರಿಸಿದೊಡೇಯದು |
ಹಿರಿದಿದ ಮಗುಚುತ | ಲೆರಡರೆ ಬರೆಯೈ ॥ ೨ ॥

## ಛ

ಸರಿಸುತೆಕಾರದ | ಕಿರುಬಳೆ ಮೇಲೆಡೆ |
ಗಿರಿಸಲು ಜರಣವ | ಸರಳವನಡಿಯೊಳು ॥ ೩ ॥

## ಭ

NR N08

ಇರಿಸುಲು ನಡುಗಡೆ | ಗಿರಿಸುತ ತಲೆಕಟ್ಟ |
ಶಿರದೆಡೆಯಲ್ಲಿದ | ನೊರೆಯೆ ಭ ಕಾರ ॥ ೪ ॥

## ಞ

ತಲೆಕೆಳಗಾದೆಯ | ಬಲಗಡೆಪಾದವ |
ಕೊಳಿಸುತಲೆಡದಡಿ | ಯಳಿಸಲಿಕಾರವು ॥ ೫ ॥

---



Digitized by ROJA MUTHIAH RESEARCH LIBRARY

ಸುರಟಿ] [ಆದಿತಾಳ.

(ಆರತಿಯೆತ್ತಿರೆ) ಎಂಬಂತೆ.

ಬಾಲಕರೆಲ್ಲರು | ಲೀಲೆಯತಾಳುತ |
ಮೇಲಹನುಡಿಗಳ | ನಾಲಿಪುದೀಗಲೆ || ಪ ||

ಂ ಃ

ಒಂದುಬಳೆಯ ಚಂದ | ದಿಂದಿಡೆ ಸೊನ್ನೆಬಿಂದು |
ಒಂದರಮೇಲೊಂದು | ನಿಂದಿರೆ ವಿಸರ್ಗವು || ೧ ||

ಆಡಲುಸಾದವು | ಜೋಡಿಸಲಾಕೃತಿ |
ಕೂಡಿಬರೆಯೆರೇಖೆ | ನೋಡೆವಸ್ತುವದಾಹ || ೨ ||

ಪೇಳಿದಶಬ್ದವ | ನಾಲಿಸಿಬರೆದದ |
ನಾಲಿಯೊಳೀಕ್ಷಿಸಿ | ಪೇಳಿರಿಬಾಲರೆ || ೩ ||

ಪೇಳಲುಬಾಯೊಳು | ಕೇಳಿ ಬರೆಯಲನು |
ಕೂಲಿಸದನಿಯನು | ಪೇಳಿರಿ ವರ್ಣವೆಂದು || ೪ ||

ನೀರದರವದೊಲು | ತೋರುವದನಿಯನು |
ಸಾರಲುಬಾಯೊಳು | ಬಾರದು ಬರೆಯಲು || ೫ ||

---

ಶಂಕರಾಭರಣ] ನೋಟ್.

(ನೀನಾರುಪೇಳೆಲೌ) ಎಂಬಂತೆ.

ಅ

ಅಕಾರದೊಳಗಣ | ಆಕಾರವುಳಿವೊಲು |
ಜೋಕೆಯಾಗಿ ಭೇದಿಸುವುದೆ | ಲೋ ಕುಮಾರನೆ || ೧ ||

Digitized by ROJA MUTHIAH RESEARCH LIBRARY



‿

ಬಿಡುತಶೇಷವೆಲ್ಲವ | ಬಿಡುಮೇಲೆ ಉಳಿವುದಂ |
ಮಡಗಲಿಂತೆ ತಲೆಯಕಟ್ಟು | ಪಡಿಯಕಾರಕೆ || ೩ ||

‿ = ೨ = ಾ

ನೋಡಿದೀರ್ಘವ | ಬರಮಾಡುತಾದಿಂದ |
ಕೂಡಲಿವನು ತಲೆಯಕಟ್ಟ ದೀರ್ಘವೆಂಬರು || ೩ ||

---

ಶಂಕರಾಭರಣ] [ನೋಟ್.

(ಶಂಬರವೈರಿಯ) ಎಂಬಂತೆ.

‿

ಈತಲೆಕಟ್ಟಿನ | ಗುರುತದಕಾರಕೆ |

ಾ

ಆಕಾರದ ಸಂಜ್ಞೆಯೆ ದೀರ್ಘ ||

ಿ

ಮಾತದಿಕಾರೆಕೆ ಗುಡಿಸೆಂದು |
ಈತೆರನಂತೆಗೆ ಇಯತಳದಿಂ || ೧ ||

ೀ

ಇಡಲೀಯಿಗೆಗುಡಿ | ದೀರ್ಘವಿದೊ |

ು

ಕೊಡೆಕೊಂಬಿ ಗುಕಾರದ ಗುರುತು ||

ೂ

ಇಡಲಾಕೊಂಬಿನ ದೀರ್ಘವನು |
ಪಡೆಯಲುಬಹುದೂಕಾರದೊಳು || ೨ ||

ೃ

ಇಡಲಿದುವೆ | ಋಕಾರದ ಗುರುತು |
ಅಡಗಿತೆ ವಟ್ರುಸುಳಿಯೆ ಇದು ||

ೄ

ಇಡೆ ೠಕಾರದ | ಗುರುತಿದುವೆ |
ಬಿಡದಿದ ವಟ್ರುಸುಳಿದೀರ್ಘವೆನಿ || ೩ ||

ೆ

ಎತ್ವದಗುರುತಿದೆ | ಕಾರಕರಿ |

ೇ

ಏತ್ವವುದೀರ್ಘವ | ಮುಂದಿರಿಸೆ |

ೈ

ಎತ್ವವ ಮೇಲ | ಡಿಗೊಟ್ರುಸುಳಿಯ |
ಐತ್ವವು ಮಡಗಲು ಬಹುದಿಂತು || ೪ ||



ೊ

ಎತ್ವವು ಮೇಲೆಡೆ | ಗಡರಿರಲು |
ಒತ್ವಕೆ ಕೊಂಬಿನ ದೀರ್ಘವಿಡು ||

ೋ

ಓತ್ವವು ಮುಂದಕೆ ದೀರ್ಘವಿಡೆ |

ೌ

ಔತ್ವವದೌವಿನ ಶಿರದಂತೆ || ೫ ||

---

ಶ್ಯಾಮಕಲ್ಯಾಣಿ| [ಆದಿತಾಳ.

(ಛಂದವೆನಿಮಗರತಿ) ಎಂಬಂತೆ.

ಒತ್ತಿನರೂಪವ | ಬಿತ್ತರಿಸುವೆನೀಗ || ಪ ||
ಒತ್ತಿವಕೀಳೆ | ಇಡು | ತೊತ್ತುತಪೇಳ್ವುದು || ಅ|ಪ ||

ಇರೆತಲೆಕಟ್ಟುಳಿ | ದಿರಿಪ್ಪುದು ವರ್ಣಕೆ ||
ಇರುವೊಲುಮಿಕ್ಕವ | ನೊರೆವುದು ಒತ್ತೆಂದು || ೧ ||

ೱ — ೞ —
ಕ. ೞ.

ಹಕ್ಕಿಯು ಪುಕ್ಕವು | ರಕ್ಕೆಯು ಕೊಕ್ಕಿದು |
ಮಕ್ಕಳೆ ಮಾತಿವ | ಕಿಕ್ಕದೆ ಕ ವೊತ್ತ || ೨ ||

ತ ೆ

ಎಳೆಯರೆ ತನಮಯ | ರಲಗಳ ಒತ್ತನು |
ತಿಳಿಪರು ಗುರುಗಳು | ಕಲಿಯಿರಿ ನಲವಿಂ || ೩ ||

---

Digitized by ROJA MUTHIAH RESEARCH LIBRARY

ಪಾರ್ಸೀನೋಟು] [ಚತುರಸ್ರ.

(ವಿಜಯಿಸು ಧೀರ ಹರಿಶ್ಚಂದ್ರ) ಎಂಬಂತೆ.

ಸ ಸ ಸ ನಿ$^{3}$ ಸಾ ರಿ ರಿ | ಸಾ ನೀ$^{2}$ ಧಾ - ||
ಶು ಭ ವ ನು ನೀ ಡು ತ | ಕಾ ಯು ತ್ತಾ - ||

ಧ ಧ ಧ ಧ ಸಾ ರಿ ರಿ | ಪ ಪ ಮಾ ಗಾ - ||
ಅ ಭ ಯ ವ ನೀ ಡು ರೆ | ಭ ಗ ವಂ ತಾ - ||

ಸಾ ಸ ಸ ಗಾ ಗ ಗ | ಮಾ ಮ ಮ ಪಾ - ||
ಜೋ ಡಿ ಸಿ ಕ ಯ್ಯ ನು | ಬೇ ಡು ವೆ ವಾಂ - ||

ಗಾ ಗ ಗ ಮ ಮ ಧಾ | ಪಾ ಮ ಮ ಗಾ - ||
ಕೂ ಡು ತೆ ಮು ದ ದಿಂ | ಪಾ ಡು ವೆ ವಾಂ - || ೧ ||

ಸಂಪೂರ್ಣಂ.



THE CROWN PRESS—MYSORE.

## ಶೋಧನ ಪತ್ರಿಕಾ.

| ಪುಟ. | ಪಙ್ತಿ. | ಅಶುದ್ಧ. | ಶುದ್ಧ. |
|---|---|---|---|
| 9 | 11 | ಉರುಳುತ | ಉರುಳುವ |
| ,, | 13 | ಉರುಳುವ | ಉರುಳುತ |
| 10 | 10 | ವಾಗಿ\|ಇರ್ವು | ವಾ-\|ಗಿರ್ವು |
| 12 | 10 | ವರಯವಾ | ವಲಯವಾ |
| 14 | 4 | ಕಡ್ಡಿಯಬಲರೆ | ಕಡ್ಡಿಯಬಲಕೆ |
| 15 | 1 | ಅರೆಗೊಂಡಿ | ಅರೆಗೊಂದಿ |
| 18 | 11 | ಬಳೆಯೆರಡಿಗೆ | ಬಳೆಯೆರಡಿಡೆ |
| 20 | 6 | (ನಿಮರರತಿ--) | (ನಿಮಗರರೆ) |
| ,, | 16 | ಚರಣದ | ಚರಣವ |
| 24 | 11 | ತಿರದೆಡೆ | ಶಿರದೆಡೆ |
| 27 | 1 | ಬಿಡುತಶೇಷ | ಬಿಡುಶೇಷ |
| ,, | 9 | ಮಾತದಿಕಾರೆಕೆ | ಮಾತಿದಿಕಾರಕೆ. |

Digitized by ROJA MUTHIAH RESEARCH LIBRARY

244

Digitized by ROJA MUTHIAH RESEARCH LIBRARY

ಪುಸ್ತಕಸೂಚಿ

ವ. ಸಂ: NR N08

ಕ್ರ. ಸಂ: 3901.

ಲೇಖಕ: ಶ್ರೀಕಂಠಯ್ಯ(ಎನ್)

ಶಿರೋನಾಮೆ: ಕರ್ನಾಟಕ ವರ್ಣ ಗೀತೆ.

ವ. ಸಂ: NR N08

ಕ್ರ. ಸಂ: 3901.

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

# ಕರ್ನಾಟಕ ವರ್ಣಗೀತೆ.

ಕ್ರಯ 2 ಆಣೆ.

ಪೂಜ್ಯರೇ, ಮಾತೃಭಾಷೆಯಾದ ಕನ್ನಡದ ಅಕ್ಷರಗಳನ್ನು ಮಕ್ಕಳು ಬಳೆ ಕಡ್ಡಿಗಳ ಮೂಲಕ ಮನೋಹರವಾಗಿರುವಂತೆ ರಚಿಸಿಕೊಳುತ ಆಯಾ ರಚನೆಗೆ ತಕ್ಕಂತೆ ಅನುಕರಣ ಗಾನಗಳನ್ನು ಉಲ್ಲಾಸದಿಂದ ಹೇಳಿಕೊಂಡು ಸುಲಭವಾಗಿ ಅಕ್ಷರಾಭ್ಯಾಸ ಮಾಡುವುದಕ್ಕನುಕೂಲಿಸುವಂತೆ ಈ ಪುಸ್ತಕವನ್ನು ರಚಿಸಲಾಗಿರುವುದು. ಇದರ ಬೆಲೆ ಪ್ರತಿ 1 ಕ್ಕೆ 2 ಆಣೆಗಳು ಮಾತ್ರ. ಒಟ್ಟಾಗಿ ತರಿಸಿಕೊಂಡರೆ ರೂಪಾಯಿಗೆ 2 ಆಣೆಯಂತೆ ಕಮೀಷನ್ ದೊರೆಯುವುದಲ್ಲದೆ ಉಪಾಧ್ಯಾಯರಿಗೆ ಉಚಿತವಾಗಿ ಅಕ್ಷರಾಭ್ಯಾಸ ಕ್ರಮವೆಂಬ ಪುಸ್ತಕ ಒಂದನ್ನು ಕಳುಹಿಸಲಾಗುವುದು. ಗಾನದ ಪರಿಶ್ರಮವಿಲ್ಲದಿರುವಂಥವರು ಸಹಾ ಈ ಪುಸ್ತಕದಲ್ಲಿರುವ ಆಯಾ ಹಾಡುಗಳ ಅಭಿಪ್ರಾಯದಮೇಲೆ ಸುಲಭವಾಗಿ ಅಕ್ಷರಾಭ್ಯಾಸ ಮಾಡಿಸಬಹುದು. ಈ ಕ್ರಮವು ಅತ್ಯುತ್ತಮವಾದುದೆಂದು ಮೈಸೂರು ಎಜುಕೇಷನಲ್ ಎಗ್ಸಿಬಿಷನ್ ಕಮಿಟಿಯವರು ಮುಂತಾಗಿ ಅನೇಕ ದೊಡ್ಡಮನುಷ್ಯರುಗಳಿಂದ ಸರಟಿಫೈ ಮಾಡಲ್ಪಟ್ಟು ಇರುವುದು. ಮಕ್ಕಳೊಂದಿಗರಾದ ಪ್ರತಿಯೊಬ್ಬರೂ ಈ ಪುಸ್ತಕವನ್ನು ಸಂಗ್ರಹಿಸಬೇಕಾದುದು ಅವಶ್ಯತಮವು. ಭಾಷಾಬಾಂಧವರು ದಯೆಯಿಟ್ಟು ಮೊದಲು ಒಂದುಪ್ರತಿಯನ್ನು ತರಿಸಿಕೊಳ್ಳಬೇಕೆಂದು ಕೋರುವೆನು.

ಅಡ್ರೆಸ್

| | | |
|---|---|---|
| ಎಸ್. ಶ್ರೀಕಂಠಯ್ಯ. | ವೈ. ನಂಜುಂಡಯ್ಯ. | ಕೆ. ಮಾಧವರಾವ್. |
| ಹೆಡ್ಮಾಸ್ಟರ್ | ಹೆಡ್ಮಾಸ್ಟರ್ | ಹೆಡ್ಮಾಸ್ಟರ್ |
| ಟಿ.ಬಿ. ಸ್ಕೂಲ್, | ಹಿಂದುಬಾಯ್ಸ್ ಎ.ವಿ. ಸ್ಕೂಲ್, | ಎ ವಿ ಸ್ಕೂಲ್, |
| ಮದ್ದೂರು. | ಮೈಸೂರು. | ಗುಂಡಲಪೇಟೆ |

Digitized by ROJA MUTHIAH RESEARCH LIBRARY